

# ಘನತೆಯ ಬದುಕಿಗಾಗಿ ಛಿದ್ರ ಬದುಕುಗಳಿಗೆ ಹೊಲಿಗೆ

ದಿನಗಳು ಉರುಳಿದ್ದೇ ಗೊತ್ತಾಗಲಿಲ್ಲ. ಹತ್ತು ವರ್ಷಗಳು ಕಳೆದುಹೋದವು. ಈಗ ವರ್ಷ ಇಪ್ಪತ್ತಾರರ ಯುವತಿ. ಅವಳು ಸಂಪೂರ್ಣ ಹೆಣ್ಣಿನಂತೆಯೇ ಬದಲಾಗಿದ್ದಳು. ವಸಂತಳನ್ನು ಹೆತ್ತ ತಾಯಿಯಂತೆಯೇ ಪ್ರೀತಿ, ಆರೈಕೆ ಕಾಳಜಿ ಮಾಡುತ್ತಿದ್ದಳು. ಅಂಗಡಿಯನ್ನು ಸಂಪೂರ್ಣ ವರ್ಷಳೇ ನೋಡಿಕೊಳ್ಳುತ್ತಿದ್ದಳು. ಅಂಗಡಿ ಮತ್ತಷ್ಟು ದೊಡ್ಡದಾಗಿ ಬೆಳೆದಿತ್ತು. ಬಂದ ಲಾಭದ ಹಣವನ್ನೆಲ್ಲ ಸಮಾಜ ಸೇವೆಗೆ ಬಳಸಲಾಗುತ್ತಿತ್ತು. ವರ್ಷ ಕೂಡಾ ಅಮ್ಮನಂತೆಯೇ ಧಾರಾಳಿಯಾಗಿದ್ದಳು. ಜನರ ಕಷ್ಟಕ್ಕೆ ಮಿಡಿದು ಸಾಕಷ್ಟು ಸಹಾಯ ಮಾಡುತ್ತಿದ್ದಳು. ತಾವು ಯಾರಿಗಾಗಿ ಕೂಡಿಡಬೇಕು, ತಮ್ಮ ಬದುಕಿಗೆ ಸಾಕಾಗುವಷ್ಟು ಇಟ್ಟುಕೊಂಡು ಉಳಿದಿದ್ದು ಜನಸೇವೆಗೆ ಮುಡಿಪಾಗಿಟ್ಟು ಬಿಡುತ್ತಿದ್ದರು. ವಸಂತಮ್ಮ ಮುಂದಾಲೋಚನೆಯಿಂದ ವರ್ಷಳ ಹೆಸರಲ್ಲಿ ಬ್ಯಾಂಕಿನಲ್ಲಿ ದುಡ್ಡು ಇಟ್ಟು ಮುಂದೆ ನಿನ್ನ ಕಷ್ಟದಲ್ಲಿ ಬೇಕಾಗುತ್ತದೆ ಅಂತ ಹೇಳಿ ಪಾಸ್ ಪುಸ್ತಕವನ್ನು ಕೊಟ್ಟಿದ್ದಳು. ನನಗ್ಯಾಕೆ ಇದು, ನೀನೇ ಇದ್ದಿಯಲ್ಲ, ಬೇಡ ಅಂತ ಹೇಳಿದರೂ ವಸಂತಮ್ಮ 'ನಿಂಗೆ ಗೊತ್ತಾಗಲ್ಲ ಮುಂದೆ ಬೇಕಾಗಬಹುದು' ಅಂತ ಹೇಳಿ 'ಯಾರದ್ದಾದರೂ ಕಷ್ಟಕ್ಕೆ ಅಂತ ಇದನ್ನು ತೆಗೆಯಬೇಡ, ನನ್ನದಲ್ಲ ಅಂತ ಇದ್ದು ಬಿಡು' ಅಂತ ಹೇಳಿದ್ದರಿಂದ ಅವಳ ಮನ ನೋಯಿಸಲು ಇಷ್ಟಪಡದೆ ಸುಮ್ಮನಾಗಿದ್ದಳು.

ವಯಸ್ಸಾದಂತೆ ವಸಂತನಿಗೆ ವಯೋಸಹಜ ಕಾಯಿಲೆಗಳು ಕಾಡಲಾರಂಭಿಸಿ, ತನ್ನ ಆಯುಸ್ಸು ತೀರುತ್ತಾ ಬಂತೆಂದು ಅನ್ನಿಸತೊಡಗಿತು. ತನ್ನವರೆಲ್ಲ ನೆನಪಾಗತೊಡಗಿತು. ಅವರೆಲ್ಲ ಈಗ ಹೇಗಿದ್ದಾರೋ, ಈ ವಸಂತನ ನೆನಪು ಅವರಿಗೆ ಇದೆಯೇ, ನನಗಂತೂ ನೆನಪಿದೆ, ಅವರನ್ನೆಲ್ಲ ನೋಡದೆ ಸತ್ತುಹೋಗಿ ಬಿಡುತ್ತೇನೆಯೋ ಎಂಬ ಆತಂಕ ಕಾಡತೊಡಗಿತು. ಅಮ್ಮನ ಮನೊವೇದನೆ ವರ್ಷಗಳಿಗೆ ಅರ್ಥವಾಗತೊಡಗಿತು. ತಾನು ಮನೆ ಬಿಟ್ಟು ಬಂದು ಹತ್ತು ವರ್ಷವಾದರೂ ಯಾರನ್ನೂ ಮರೆಯಲಾಗಿಲ್ಲ. ಅಪ್ಪ, ಅಮ್ಮ, ದೊಡ್ಡಪ್ಪ, ದೊಡ್ಡಮ್ಮ, ಅಕ್ಕಂದಿರು, ಮಾವ, ಅತ್ತೆ, ಮಾವನ ಮಕ್ಕಳು, ತನ್ನ ಸೋದರತ್ತೆ ಮತ್ತು ಅವರ ಮಕ್ಕಳು, ಊರಿನವರು, ಸ್ನೇಹಿತರು ಯಾರನ್ನೂ ಮರೆಯಲಾಗಿಲ್ಲ. ಅವರನ್ನೆಲ್ಲ ನೋಡಬೇಕು, ಅವರ ಜೊತೆ ಇರಬೇಕು ಅನ್ನೋ ಬಯಕೆ ಸದಾ ಕಾಡುತ್ತಿರುತ್ತದೆ, ಇನ್ನು ಅಮ್ಮನಿಗೆ ತನ್ನವರ ಬಗ್ಗೆ ಕಾಡದೆ ಇರುತ್ತದೆಯೇ, ಆದರೆ ಅವರನ್ನು ನೋಡಲು ಅಮ್ಮನನ್ನೇ ಕರೆದುಕೊಂಡು ಹೋಗೋಣವೆಂದರೆ ಈ ಅಂಗಡಿ ಬಿಟ್ಟು ಹೋಗಲು ಸಾಧ್ಯವಿಲ್ಲ, ಅವರನ್ನೇ ಕರೆಸಿದರೆ ಹೇಗೆ? ಹೌದು, ಹಾಗೆ ಮಾಡಬೇಕು ಅಂದುಕೊಂಡು ವರ್ಷ ಅಮ್ಮನ ಊರಿಗೆ ಹೋಗಿ ಅವರ ಕಡೆಯವರು ಎಲ್ಲಿದ್ದಾರೆ, ಅಮ್ಮನ ಸ್ಥಿತಿ ಹೀಗಾಗಿದೆ, ಒಮ್ಮೆ ಬಂದು ಹೋಗಿ ಅಂತ ತಿಳಿಸಿ ಅವರನ್ನು ಕರೆದುಕೊಂಡು ಬರಲು ತನಗೆ ತುಂಬಾ ಗೊತ್ತಿರುವ, ನಂಬಿಕೆ ಇರುವ ತನ್ನ ಹಾಗೂ ಅಮ್ಮನಿಗೆ ಆತ್ಮೀಯನಾಗಿದ್ದ, ಊರೂರು ಸುತ್ತಿ ಸಾಕಷ್ಟು ಅನುಭವ ಗಳಿಸಿದ್ದ ಸಿದ್ದುವನ್ನು ಒಪ್ಪಿಸಿದಳು. ಇವರ ಖರ್ಚಿಗಾಗುವಷ್ಟು ಹಣವನ್ನೂ ನೀಡಿ ಕಳಿಸಿಕೊಟ್ಟಿದ್ದಳು. ಸಿದ್ದು ಯಾವ ಕೆಲಸ ಹಿಡಿದರೂ ಅದು ಆಗದೆ ಸುಮ್ಮನೆ ಕೂರುವವನಲ್ಲ. ಅಲ್ಲದೆ ಸಿದ್ದುವಿನ ಕಷ್ಟದ ದಿನಗಳಲ್ಲಿ ಸಾಕಷ್ಟು ಸಹಾಯವನ್ನು ವಸಂತ ಹಾಗೂ ವರ್ಷಳಿಂದ ಪಡೆದ ಕೃತಜ್ಞತೆ ಬೇರೆ ಇತ್ತು. ಹಾಗಾಗಿ ಈ ಕೆಲಸ ಮಾಡಲು ಸಿದ್ದು ಒಪ್ಪಿಕೊಂಡು ವಸಂತಮ್ಮನ ಕಡೆಯವರನ್ನು ಹುಡುಕಲು ಹೊರಟಿದ್ದ, ಅದು ವಸಂತಮ್ಮನಿಗೆ ಗೊತ್ತಾಗದ ಹಾಗೆ, ಗುಟ್ಟು ಮಾಡಲು ಕಾರಣವಿತ್ತು. ಅಕಸ್ಮಾತಾಗಿ ಅವರು ಬರಲು ಒಪ್ಪದಿದ್ದರೆ ಅದು ಗೊತ್ತಾಗಿ ಅಮ್ಮ ಸಂಕಟಪಡುವುದು ಬೇಡವೆಂದು